ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ
ಸಿರುಗುಪ್ಪ

**ಸಿ.ಸಿ.ನಂ: 332/2015**

**ಸಿಡಬ್ಲೂ 01 ಪಿ.ಡಬ್ಲೂ 01**

ಸಾಕ್ಷಿದಾರರ ಹೆಸರು ಃ ಸುರೇಶ್ ಕುಮಾರ್
ತಂದೆಯ ಹೆಸರು ಃ ಡಬ್ಲ್ಯೂ ಎ ತಿಮ್ಮಯ್ಯ
ವಯಸ್ಸು ಃ 53 ವರ್ಷ
ವೃತ್ತಿ ಃ ಮುಖ್ಯ ವ್ಯವಸ್ಥಾಪಕರು, ಕ್ಷೇತ್ರೀಯ ಕಾರ್ಯಲಯ, ಸಿಂಡಿಕೇಟ್ ಬ್ಯಾಂಕ್, ಮೈಸೂರು
ವಾಸ ಃ ಮೈಸೂರು

ಪ್ರಮಾಣ ಮಾಡಿದ ದಿನಾಂಕಃ 16.01.2018 ಮುಖ್ಯ ವಿಚಾರಣೆಃ ಎ .ಪಿ .ಪಿ ಇವರಿಂದ.

ನಾನು ದಿನಾಂಕ 25.05.2009 ರಿಂದ ದಿನಾಂಕ 04.08.2012 ರವರೆಗೆ ಸಿಂಡಿಕೇಟ್ ಬ್ಯಾಂಕ್ ಸಿರುಗುಪ್ಪ ಶಾಖೆಯಲ್ಲಿ ವ್ಯವಸ್ಥಾಪಕನಾಗಿ ಕಾರ್ಯ ನಿರ್ವಹಿಸಿರುತ್ತೇನೆ. 2007 ರಲ್ಲಿ 1ನೇ ಆರೋಪಿಯು ಬಾರಿಕರ್ ಬುಡ್ಡಪ್ಪ ತಂದೆ ಮಲ್ಲಪ್ಪ ಎಂದು, 2ನೇ ಆರೋಪಿಯು ಶಂಕ್ರಮ್ಮ ಗಂಡ ದಿ ಗಂಗಯ್ಯ ಅಲಿಯಾಸ್ ಗಂಗಪ್ಪ ಎಂದು ಉಳಿತಾಯ ಖಾತೆ ಪ್ರಾರಂಭಿಸಿದ್ದರು. ಸದರಿ ಖಾತೆಯನ್ನು ಪ್ರಾರಂಭಿಸಲು ಕುರುವಳ್ಳಿ ಗ್ರಾಮ ಲೆಕ್ಕಾಧಿಕಾರಿಯವರಿಂದ ವಾಸ ದೃಢೀಕೃತ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದರು. ನಂತರ 2007 ರಲ್ಲಿ 1 ಮತ್ತು 2ನೇ ಆರೋಪಿತರು ಜಂಟಿಯಾಗಿ ಟ್ರ್ಯಾಕ್ಟರ್ ಮತ್ತು ಬೆಳೆ ಸಾಲಕ್ಕಾಗಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಸಾಲದ ಅರ್ಜಿಗೆ 3 ಮತ್ತು 4 ನೇ ಆರೋಪಿತರು ಜಾಮೀನಾಗಿರುತ್ತಾರೆ. 5 ಮತ್ತು 6ನೇ ಆರೋಪಿತರು ಸಬ್ ರಿಜಿಸ್ಟರ್ ಕಛೇರಿಯಲ್ಲಿ ಅಡಮಾನ ಪತ್ರಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ. ಚಾಸಾ 2 ರವರು ಬೆಳೆ ಸಾಲಕ್ಕಾಗಿ 1 ಲಕ್ಷ 20 ಸಾವಿರ, ಟ್ರ್ಯಾಕ್ಟರ್ ಮತ್ತು ಟ್ರ್ಯಾಲಿ ಸಾಲಕ್ಕಾಗಿ 5 ಲಕ್ಷ 50 ಸಾವಿರ ರೂಪಾಯಿ ಹಣವನ್ನು ಮಂಜೂರು ಮಾಡಿರುತ್ತಾರೆ. ನಂತರ ಸದರಿ ಟ್ರ್ಯಾಕ್ಟರ್‌ನ್ನು ಬಳ್ಳಾರಿ ಸಾರಿಗೆ ನೊಂದಣಾಧಿಕಾರಿಯಲ್ಲಿ ನೋಂದಯಿರುತ್ತಾರೆ. ಸದರಿ ಟ್ರ್ಯಾಕ್ಟರ್ ನಂ ಕೆ ಎ 34 6950

ಟ್ರ್ಯಾಲಿ ನಂ ಕೆ ಎ 34 ಟಿ 6951 ಅಂತಾ ಇರುತ್ತದೆ. ಸದರಿ ವಾಹನಗಳ ಸಾಲಗಳಿಗಾಗಿ ಕುರುವಳ್ಳಿ ಗ್ರಾಮದ ಸರ್ವೆ ನಂ 329-ಸಿ1 ಒಟ್ಟು ಕ್ಷೇತ್ರ 5 ಎಕರೆ 05 ಸೆಂಟ್ಸ್ ಮತ್ತು 329-ಸಿ3 ಒಟ್ಟು ಕ್ಷೇತ್ರ 1 ಎಕರೆ 63 ಸೆಂಟ್ಸ್ ಕಮತ್ತು ಸರ್ವೆ 333-ಎ 1.65 ಸೆಂಟ್ಸ್ ಜಮೀನುಗಳನ್ನು ಆಧಾರವಾಗಿ ನೀಡಿರುತ್ತಾರೆ.

2. 1 ಮತ್ತು 2ನೇ ಆರೋಪಿತರು ಸಾಲ ಮರು ಪಾವತಿ ಮಾಡದೇ ಇದ್ದಾಗ ನಾನು ಹಳ್ಳಿಯಲ್ಲಿ ಹೋಗಿ ವಿಚಾರಿಸಿದಾಗ ಬಾರಿಕರ ಬುಡ್ಡಪ್ಪ ಮತ್ತು ಶಂಕ್ರಮ್ಮ ಎನ್ನುವವರು ಸಾಲ ಪಡೆಯುವ ಪೂರ್ವದಲ್ಲಿಯೇ ಮೃತ ಪಟ್ಟಿರುತ್ತಾರೆಂದು ತಿಳಿಯಿತು. ನಾನು ಸದರಿ ವಿಷಯವನ್ನು ನನ್ನ ಮೇಲಾಧಿಕಾರಿಯವರ ಗಮನಕ್ಕೆ ತಂದಿರುತ್ತೇನೆ. ಅವರ ಆದೇಶದಂತೆ ಆರೋಪಿತರ ವಿರುದ್ಧ ದೂರು ನೀಡಿರುತ್ತೇನೆ. ನಂತರ ಪೋಲೀಸರು ಬ್ಯಾಂಕ್‌ಗೆ ಬಂದು ಪಂಚನಾಮೆ ಮಾಡಿ ಮೂಲ ದಾಖಲೆಗಳನ್ನು ಜಪ್ತು ಪಡಿಸಿಕೊಂಡಿರುತ್ತಾರೆ.

3. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು, ಈಗ ನೋಡುತ್ತಿರುವ ದಾಖಲೆಯ ಮೇಲಿರುವ ಸಹಿಯನ್ನು ನೋಡಿ ಗುರುತಿಸಿದ್ದು ಜಪ್ತು ಪಂಚನಾಮೆಯಾಗಿದ್ದು ಅದನ್ನು ನಿಪಿ 2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ 2(ಎ) ಎಂದು, ಜಂಟಿ ಉಳಿತಾಯ ಖಾತೆ ಅರ್ಜಿಯನ್ನು ನಿಪಿ 3 ಎಂದು, ವಾಸಸ್ಥಳ ಪ್ರಮಾಣ ಪತ್ರವನ್ನು ನಿಪಿ 4 ಎಂದು, ಕೃಷಿ ಸಾಲದ (ಟ್ರ್ಯಾಕ್ಟರ್ ಮತ್ತ ಟ್ರ್ಯಾಲಿಯ) ಅರ್ಜಿಯನ್ನು ನಿಪಿ 5 ಎಂದು, ಟ್ರ್ಯಾಕ್ಟರ್ ಸಾಲ ಪಡೆದ ರಶೀದಿ ನಿಪಿ 6 ಎಂದು, ಅಗ್ರಿಮೆಂಟ್ ಡೀಡ್ ನಿಪಿ 7 ಎಂದು, ಅಗ್ರಿಮೆಂಟ್ ಗ್ಯಾರೆಂಟ್ ಡೀಡ್ ನಿಪಿ 8 ಎಂದು, ಟ್ರ್ಯಾಕ್ಟರ್ ಸಾಲ ಮಂಜೂರಾತಿ ಪತ್ರ ನಿಪಿ 9 ಎಂದು, ಟ್ರ್ಯಾಕ್ಟರ್ ಮತ್ತು ಟ್ರ್ಯಾಲಿಯ ಇನ್ಸೂರೆನ್ಸ್ ದೃಡೀಕೃತ ಪತ್ರ ನಿಪಿ 10 ಎಂದು, ಇತರೆ ಬ್ಯಾಂಕಿನಲ್ಲಿ ಸಾಲವಿಲ್ಲದ ಬಗ್ಗೆ ನೀಡಿದ ಪ್ರಮಾಣ ಪತ್ರ ನಿಪಿ 11 ಎಂದು, ಫಾರಂ 60

ನಿಪಿ 12 ಎಂದು, ಜಮೀನು ನಕ್ಷೆ ನಿಪಿ 13 ಎಂದು, ಎರಡು ಭೂಮಿಯ ಮಾರುಕಟ್ಟೆ ದೃಡೀಕೃತ ಪತ್ರ ನಿಪಿ 14 ಮತ್ತು ನಿಪಿ 15 ಎಂದು, ಜಮೀನಿನಲ್ಲಿ ಬೆಳೆ ಬೆಳೆದ ಬಗ್ಗೆ ಗ್ರಾಮ ಲೆಕ್ಕಾಧಿಕಾರಿ ಕುರುವಳ್ಳಿ ನೀಡಿದ ಎರಡು ಪ್ರಮಾಣ ಪತ್ರ ನಿಪಿ 16 ಮತ್ತು ನಿಪಿ 17 ಎಂದು, ಎರಡು ಭೂ ಕಂದಾಯ ಬೇ ಬಾಕಿ ದೃಡೀಕೃತ ಪ್ರ ನಿಪಿ 18 ಮತ್ತು ನಿಪಿ 19 ಎಂದು, ಒಟ್ಟು ಎರಡು ಕಂದಾಯ ಪಾವತಿ ರಶೀದಿ ನಿಪಿ 20 ಮತ್ತು ನಿಪಿ 21 ಎಂದು, ಋಣಭಾರ ರಹಿತ ಪ್ರಮಾಣ ಪತ್ರ ನಿಪಿ 22 ಎಂದು, ಎರಡು ನಮೂನೆ-24 ಫಾರಂ ನಿಪಿ 23 ಮತ್ತು 24 ಎಂದು, ವಂಶವೃಕ್ಷ ನಿಪಿ 25 ಎಂದು, ಟ್ರ್ಯಾಕ್ಟರ್ ಮತ್ತು ಟ್ರ್ಯಾಲಿಯ ಡೀಲರ್ ಶಿಪ್‌ಗೆ ಡಿ ಡಿ ಕಳುಹಿಸಿದ ಬಗ್ಗೆ ಎರಡು ಪತ್ರ ನಿಪಿ 26 ಮತ್ತು ನಿಪಿ 27 ಎಂದು, ಕೊಟೇಷನ್ ನಿಪಿ 28 ಎಂದು, ಒಟ್ಟು ಮೂರು ಪಹಣಿ ಪತ್ರಿಕೆಗಳನ್ನು ನಿಪಿ 29 ರಿಂದ ನಿಪಿ 31 ಎಂದು, ಒಟ್ಟು ಎರಡು ಟ್ಯಾಕ್ಸ್ ಇನ್‌ವಾಯಿಸ್ ನಿಪಿ 32 ಮತ್ತು ನಿಪಿ 33 ಎಂದು, ಒಟ್ಟು ಎರಡು ನಮೂನೆ 23 ರ ದೃಡೀಕೃತ ನಕಲು ನಿಪಿ 34 ಮತ್ತು ನಿಪಿ 35 ಎಂದು, ಸಿಂಪಲ್ ಮಾರ್ಟ್‌ಗೇಜ್ ಡೀಡ್ ನಿಪಿ 36 ಎಂದು, ಕಾನೂನು ಅಭಿಪ್ರಾಯ ವರದಿಯನ್ನು ನಿಪಿ 37 ಎಂದು, ಬೆಳೆಸಾಲದ ಅರ್ಜಿ ನಿಪಿ 38 ಎಂದು, ಬೆಳೆ ಸಾಲದ ಕರಾರು ಪತ್ರದ ನಿಪಿ 39 ಎಂದು, ಬೆಳೆ ಸಾಲದ ಗ್ಯಾರಂಟಿ ಪತ್ರ ನಿಪಿ 40 ಎಂದು, ಬೆಳೆ ಸಾಲದ ಮಂಜೂರಾತಿ ಪತ್ರ ನಿಪಿ 41 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃಶ್ರೀ ಜಿ ಎಂ ಆರ್, ಶ್ರೀ ಯು ಸಿ ಮತ್ತು ಶ್ರೀ ಎ ಎಸ್ ಜಿ ಆರೋಪಿ ಪರ ವಕೀಲರು.

ಈ ಹಂತದಲ್ಲಿ 1, 2, 4 ರಿಂದ 6 ಪರ ವಕೀಲರು ಪಾಟೀ ಸವಾಲಿಗೆ ಸವಯವಕಾಶ ಕೋರಿರುತ್ತಾರೆ. ಸಾಕ್ಷಿದಾರರು ಜವಾಬ್ದಾರಿಯುತ ಹುದ್ದೆಯಲ್ಲಿದ್ದು ಮೈಸೂರು ನಗರದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಪ್ರಕರಣವು ಸಹ ತುಂಬಾ ಹಳೆಯ

ಪ್ರಕರಣವಾಗಿರುತ್ತದೆ. ಈ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ವಕೀಲರ ವಿನಂತಿಯನ್ನು ತಳ್ಳಿಹಾಕಿ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

ಜೆ ಎಂ ಎಫ್ ಸಿ ಸಿರುಗುಪ್ಪ

ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ
ಸಿರುಗುಪ್ಪ

**ಸಿ.ಸಿ.ನಂ: 332/2015**

**ಸಿಡಬ್ಲೂ 02 ಪಿ.ಡಬ್ಲೂ 02**

ಸಾಕ್ಷಿದಾರರ ಹೆಸರು ಃ ತಿಮ್ಮಪ್ಪ
ತಂದೆಯ ಹೆಸರು ಃ ಹನುಮಂತು
ವಯಸ್ಸು ಃ 65 ವರ್ಷ
ವೃತ್ತಿ ಃ ನಿವೃತ್ತಿ ಜೀವನ
ವಾಸ ಃ ಬಳ್ಳಾರಿ

ಪ್ರಮಾಣ ಮಾಡಿದ ದಿನಾಂಕಃ16.01.2018 ಮುಖ್ಯ ವಿಚಾರಣೆಃ ಎ .ಪಿ .ಪಿ ಇವರಿಂದ.

ನಾನು ಜೂನ್ 2006 ರಿಂದ ಜೂನ್ 2009 ರವರೆಗೆ ಸಿಂಡಿಕೇಟ್ ಬ್ಯಾಂಕ್ ಶಾಖೆ ಸಿರುಗುಪ್ಪದಲ್ಲಿ ವ್ಯವಸ್ಥಾಪಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಚಾಸಾ 1 ನನಗೆ ಗೊತ್ತು. ನನ್ನ ನಂತರ ಸದರಿ ಹುದ್ದೆಗೆ ವರ್ಗಾವಣೆಯಾಗಿ ಬಂದಿರುತ್ತಾರೆ. ಆರೋಪಿತರು 1, 2, 4 ರಿಂದ 6 ರವರು ಗೊತ್ತು. 1 ಮತ್ತು 2ನೇ ಆರೋಪಿತರು ಬ್ಯಾಂಕಿನಲ್ಲಿ ಉಳಿತಾಯ ಖಾತೆ ತೆಗೆಯುವಾಗ 5ನೇ ಆರೋಪಿಯು ಪರಿಚಯ ಮಾಡಿಸಿಕೊಟ್ಟಿರುತ್ತಾನೆ. ನಂತರ 5ನೇ ಆರೋಪಿಯು 1 ಮತ್ತು 2 ನೇ ಆರೋಪಿಯನ್ನು ಕರೆದುಕೊಂಡು ಬಂದು ಅವರ ಜೊತೆ ಕೆಲವು ದಾಖಲೆಗಳನ್ನು ತೆಗೆದುಕೊಂಡು ಬಂದು ಅವರಿಗೆ ಟ್ರ್ಯಾಕ್ಟರ್ ಮತ್ತು ಟ್ರ್ಯಾಲಿ ಹಾಗೂ ಬೆಳೆ ಸಾಲ ಬೇಕೆಂದು ಕೇಳಿಕೊಂಡಿರುತ್ತಾರೆ.

2. 1 ಮತ್ತು 2ನೇ ಆರೋಪಿತರು(ಸಾಕ್ಷಿದಾರರು ದಾಖಲೆಗಳನ್ನು ನೋಡಿ ಸಾಕ್ಷಿಯು ನುಡಿಯುತ್ತಿದ್ದಾರೆ) ಆರೋಪಿತರು ತಮ್ಮ ಅರ್ಜಿಯ ಜೊತೆಗೆ ಪಹಣಿ ಪತ್ರಿಕೆ, ಫಾರಂ ನಂ 24, ವಾಸಸ್ಥಳ ಪ್ರಮಾಣ ಪತ್ರ, ಚೆಕ್ಕುಬಂದಿ, ಎನ್ ಡಿ ಸಿ ದಾಖಲೆಗಳನ್ನು ನೀಡಿದ್ದು ಇವುಗಳನ್ನು ಕಾನೂನಿನ ಅಭಿಪ್ರಾಯ ಕೋರಿ ಬ್ಯಾಂಕ್ ಕಾನೂನು ಸಲಹೆಗಾರರಿಗೆ ಕಳುಹಿಸಿಕೊಟ್ಟಿರುತ್ತೇನೆ. ನಂತರ ನಾನು ಸ್ಥಳ ಪರಿಶೀಲನೆ

ಮಾಡಿ ಹಾಗೂ ಆರೋಪಿತರ ಬಗ್ಗೆ ವಿಚಾರಣೆ ಮಾಡಿರುತ್ತೇನೆ. ಕಾನೂನಿನ ಅಭಿಪ್ರಾಯದಲ್ಲಿ ನೋಂದಾಯಿತ ಅಡಮಾನ ಪತ್ರವನ್ನು ಪಡೆದುಕೊಂಡು ಸಾಲ ನೀಡಬಹುದೆಂದು ತಮ್ಮ ಅಭಿಪ್ರಾಯ ನೀಡಿರುತ್ತಾರೆ. ನಂತರ ನಾನು ಇನ್ನಿತರ ದಾಖಲೆಗಳಾದ ಮಾರ್ಟ್‌ಗೇಜ್ ಡೀಡ್ ಪಡೆದುಕೊಂಡಿರುತ್ತೇನೆ. 1 ಮತ್ತು 2ನೇ ಆರೋಪಿತರು ಸದರಿ ಸಾಲಕ್ಕಾಗಿ ಕುರುವಳ್ಳಿ ಗ್ರಾಮದ ಸರ್ವೆ ನಂ 329ಸಿ-1 ಕ್ಷೇತ್ರ 5.5, 329ಸಿ-3 ಕ್ಷೇತ್ರ 1.63 ಮತ್ತು 333-ಎ ಕ್ಷೇತ್ರ 1.65 ಜಮೀನುಗಳನ್ನು ಮಾರ್ಟ್‌ಗೇಜ್ ಮಾಡಿಕೊಟ್ಟಿರುತ್ತಾರೆ. ಮೊರ್ಟ್‌ಗೇಜ್ ಡೀಡ್‌ಗೆ 5 ಮತ್ತು 6 ನೇ ಆರೋಪಿತರ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ. ನಂತರ ಆರೋಪಿತರಿಗೆ ಟ್ರ್ಯಾಕ್ಟರ್ ಮತ್ತು ಟ್ರ್ಯಾಲಿಗಾಗಿ 5 ಲಕ್ಷ 50 ಸಾವಿರ ರೂಪಾಯಿ ಮತ್ತು ಬೆಳೆ ಸಾಲ 1 ಲಕ್ಷ 20 ಸಾವಿರ ರೂಪಾಯಿ ಸಾಲ ಮಂಜೂರು ಮಾಡಿರುತ್ತೇನೆ. ಜಾಮೀನುದಾರರಾಗಿ 3 ಮತ್ತು 4ನೇ ಆರೋಪಿತರು ಸಹಿ ಮಾಡಿರುತ್ತಾರೆ. ನಂತರ ನಾನು ಬೇರೆ ಕಡೆ ವರ್ಗಾವಣೆಯಾಗಿರುತ್ತದೆ. ನಂತರ ನನಗೆ ಆರೋಪಿ 1 ಮತ್ತು 2 ರವರು ಮರಣ ಹೊಂದಿದ ಬಾರಿಕರ್ ಬುಡ್ಡಪ್ಪ ತಂದೆ ಮಲ್ಲಪ್ಪ ಮತ್ತು ಶಂಕ್ರಮ್ಮ ಗಂಡ ಜಿ ಗಂಗಯ್ಯ ಇವರು ತಾವೇ ಎಂದು ತಮ್ಮ ನಿಜ ಹೆಸರನ್ನು ಬಚ್ಚಿಟ್ಟು ಅವರಂತೆ ನಟಿಸಿ ಸಾಲ ಪಡೆದಿರುತ್ತಾರೆ ಎಂದು ನನಗೆ ಗೊತ್ತಾಯಿತು. ನಾನು ಸರಿಯಾಗಿ ದಾಖಲೆಗಳನ್ನು ಪರಿಶೀಲಿಸಿರುತ್ತೇನೆ. ನನಗೆ ಯಾವುದೇ ಸಂಶಯ ಬಂದಿರುವುದಿಲ್ಲ. ಪೋಲೀಸರು ನನ್ನ ಹೇಳಿಕೆ ಪಡೆದಿರುವುದಿಲ್ಲ.

3. ಜಂಟಿ ಉಳಿತಾಯ ಖಾತೆ ಅರ್ಜಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 3 ಎಂದು ಗುರುತಿಸಲಾಗಿರುತ್ತದೆ. ವಾಸಸ್ಥಳ ಪ್ರಮಾಣ ಪತ್ರವನ್ನು ಅದನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 4 ಎಂದು, ಕೃಷಿ ಸಾಲದ (ಟ್ರ್ಯಾಕ್ಟರ್ ಮತ್ತ ಟ್ರ್ಯಾಲಿಯ) ಅರ್ಜಿಯನ್ನು ಅದನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 5 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ 5(ಎ)

ಎಂದು, ಟ್ರ್ಯಾಕ್ಟರ್ ಸಾಲ ಪಡೆದ ರಶೀದಿ ಅದನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 6 ಎಂದು, ಅಗ್ರಿಮೆಂಟ್ ಡೀಡ್ ಅದನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 7 ಎಂದು, ಅಗ್ರಿಮೆಂಟ್ ಗ್ಯಾರೆಂಟ್ ಡೀಡ್ ಅದನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 8 ಎಂದು, ಟ್ರ್ಯಾಕ್ಟರ್ ಸಾಲ ಮಂಜೂರಾತಿ ಪತ್ರ ಅದನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 9 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಗಳನ್ನು ನಿಪಿ 9(ಎ) ರಿಂದ ನಿಪಿ 9(ಸಿ) ಎಂದು, ಟ್ರ್ಯಾಕ್ಟರ್ ಮತ್ತು ಟ್ರ್ಯಾಲಿಯ ಇನ್ಸೂರೆನ್ಸ್ ದೃಡೀಕೃತ ಪತ್ರ ಅದನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 10 ಎಂದು, ಇತರೆ ಬ್ಯಾಂಕಿನಲ್ಲಿ ಸಾಲವಿಲ್ಲದ ಬಗ್ಗೆ ನೀಡಿದ ಪ್ರಮಾಣ ಪತ್ರ ಅದನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 11 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ 11(ಎ) ಎಂದು, ಫಾರಂ 60 ಅದನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 12 ಎಂದು, ಜಮೀನು ನಕ್ಷೆ ಅದನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 13 ಎಂದು, ಎರಡು ಭೂಮಿಯ ಮಾರುಕಟ್ಟೆ ದೃಡೀಕೃತ ಪತ್ರ ಅದನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 14 ಮತ್ತು ನಿಪಿ 15 ಎಂದು, ಜಮೀನಿನಲ್ಲಿ ಬೆಳೆ ಬೆಳೆದ ಬಗ್ಗೆ ಗ್ರಾಮ ಲೆಕ್ಕಾಧಿಕಾರಿ ಕುರುವಳ್ಳಿ ನೀಡಿದ ಎರಡು ಪ್ರಮಾಣ ಪತ್ರ ಅದನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 16 ಮತ್ತು ನಿಪಿ 17 ಎಂದು, ಎರಡು ಭೂ ಕಂದಾಯ ಬೇ ಬಾಕಿ ದೃಡೀಕೃತ ಪತ್ರ ಅದನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 18 ಮತ್ತು ನಿಪಿ 19 ಎಂದು, ಒಟ್ಟು ಎರಡು ಕಂದಾಯ ಪಾವತಿ ರಶೀದಿ ಅವುಗಳನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 20 ಮತ್ತು ನಿಪಿ 21 ಎಂದು, ಋಣಭಾರ ರಹಿತ ಪ್ರಮಾಣ ಪತ್ರ ಅದನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 22 ಎಂದು, ಎರಡು ನಮೂನೆ-24 ಫಾರಂ ಅದನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ 23 ಮತ್ತು 24 ಎಂದು,

ವಂಶವೃಕ್ಷ ನಿಪಿ 25 ಎಂದು, ಟ್ರ್ಯಾಕ್ಟರ್ ಮತ್ತು ಟ್ರ್ಯಾಲಿಯ ಡೀಲರ್ ಶಿಪ್‌ಗೆ ಡಿ ಡಿ ಕಳುಹಿಸಿದ ಬಗ್ಗೆ ಎರಡು ಪತ್ರ ಅವುಗಳನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 26 ಮತ್ತು ನಿಪಿ 27 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ 26(ಎ) ಮತ್ತು ನಿಪಿ 27(ಎ) ಎಂದು, ಕೊಟೇಷನ್ ಅದನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 28 ಎಂದು, ಒಟ್ಟು ಮೂರು ಪಹಣಿ ಪತ್ರಿಕೆಗಳನ್ನು ಅವುಗಳನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 29 ರಿಂದ ನಿಪಿ 31 ಎಂದು, ಒಟ್ಟು ಎರಡು ಟ್ಯಾಕ್ಸ್ ಇನ್‌ವಾಯಿಸ್ ಅದನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 32 ಮತ್ತು ನಿಪಿ 33 ಎಂದು, ಒಟ್ಟು ಎರಡು ನಮೂನೆ 23 ರ ದೃಡೀಕೃತ ನಕಲು ಅದನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 34 ಮತ್ತು ನಿಪಿ 35 ಎಂದು, ಸಿಂಪಲ್ ಮಾರ್ಟ್‌ಗೇಜ್ ಡೀಡ್ ಅದನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 36 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ 36(ಎ) ಎಂದು, ಕಾನೂನು ಅಭಿಪ್ರಾಯ ವರದಿಯನ್ನು ಅದನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 37 ಎಂದು, ಬೆಳೆಸಾಲದ ಅದನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಅರ್ಜಿ ನಿಪಿ 38 ಎಂದು, ಬೆಳೆ ಸಾಲದ ಕರಾರು ಪತ್ರದ ಅದನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 39 ಎಂದು, ಬೆಳೆ ಸಾಲದ ಗ್ಯಾರಂಟಿ ಪತ್ರ ಅದನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 40 ಎಂದು, ಬೆಳೆ ಸಾಲದ ಮಂಜೂರಾತಿ ಪತ್ರ ಅದನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 41 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ 41(ಎ) ರಿಂದ ನಿಪಿ 41(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದಲ್ಲಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃಶ್ರೀ ಜಿ ಎಂ ಆರ್, ಶ್ರೀ ಯು ಸಿ ಮತ್ತು ಶ್ರೀ ಎ ಎಸ್ ಜಿ ಆರೋಪಿ ಪರ ವಕೀಲರು.

ಈ ಹಂತದಲ್ಲಿ 1, 2, 4 ರಿಂದ 6 ಪರ ವಕೀಲರು ಪಾಟೀ ಸವಾಲಿಗೆ ಸವಯವಕಾಶ ಕೋರಿರುತ್ತಾರೆ. ಆರೋಪಿ ಪರ ವಕೀಲರ ವಿನಂತಿಯನ್ನು ತಳ್ಳಿಹಾಕಿ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

ಜೆ ಎಂ ಎಫ್ ಸಿ ಸಿರುಗುಪ್ಪ